ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನ ಯೋಜನೆಯ ಅಡಿಯಲ್ಲಿ 170 ರಿಂದ 250 ಹಾಸಿಗೆಗಳುಳ್ಳ ಆಸ್ಪತ್ರೆಯಾಗಿ ಪರಿವರ್ತಿಸ ಲಾಗುವುದೆಂದು ಈಗಾಗಲೇ ಹೇಳಿದ್ದೇನೆ. ಜೊತೆಗೆ ಹುಬ್ಬಳ್ಳಿಯಲ್ಲಿ ಟೀಚಿಂಗ್ ಸಂಸ್ಥೆ ಯೊಂದಿದೆ. ಆದನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ 250 ಹಾಸಿಗೆ ಗಳುಳ್ಳ ಆಸ್ಪತ್ರೆಯನ್ನಾಗಿ ಮಾಡಿದರೆ ಸಾಕು ಎಂದು ನನಗನ್ನಿಸುತ್ತದೆ. ಇನ್ನೂರು, ಮುನ್ನೂರು, ಐದುನೂರು ಹಾಸಿಗೆಗಳ ಸೌಲಭ್ಯವನ್ನು ಒದಗಿಸಿಕೊಟ್ಟುಬಿಟ್ಟರೆ ಭಾರಿ ಗುಣಾತ್ಮಕವಾದ ಬದಲಾವಣೆಯಾಗುತ್ತದೆಂದು ತಿಳಿದುಕೊಳ್ಳುವುದು ತಪ್ಪು.

ಶ್ರೀ ಚಂದ್ರಕಾಂತ್ ಬೆಲ್ಲದ್ :- ಜನಸಂಖ್ಯೆ ಗಾತ್ರದಲ್ಲೂ ಸಹಿತ ಮೈಸೂರಿ ಗಿಂತಲೂ ನಮ್ಮದು ದೊಡ್ಡ ನಗರವಾಗಿದೆ. ಮೈಸೂರು ಮತ್ತು ಮಂಗಳೂರು ನಗರದಲ್ಲಿ ಇರುವಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವ ರೀತಿಯ ಸೌಲಭ್ಯಗಳಿವೆ, ಅವುಗಳನ್ನು ಇಲ್ಲಿನ ಆಸ್ಪತ್ರೆಯಲ್ಲೂ ಕೂಡ ನೀವು ಒದಗಿಸಬೇಕಲ್ಲವೇ? ಜನಸಂಖ್ಯೆ ಗಾತ್ರದ ಮೇಲೆ ಮೈಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಬೆಡ್‌ಗಳಿವೆ? ಮಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಬೆಡ್‌ಗಳಿವೆಯೋ, ಆ ಗಾತ್ರಕ್ಕೆ ಸರಿಸಮಾನವಾಗುವಂತೆ ಇಲ್ಲಿಯ ಆಸ್ಪತ್ರೆಯ ಬೆಡ್‌ಗಳ ಸಂಖ್ಯೆಯನ್ನೂ ಕೂಡ ನೀವು ಹೆಚ್ಚಿಸಬೇಕಲ್ಲವೇ? ಇಲ್ಲಿಗೆ ಹುಬ್ಬಳ್ಳಿ 30 ಕಿ. ಮೀ. ದೂರದಲ್ಲಿದೆ. ದಯವಿಟ್ಟು ಇದನ್ನು 500 ಹಾಸಿಗೆಗಳಿಗೆ ವಿಸ್ತರಿಸಬೇಕು. ಇವತ್ತಿನವರೆಗೂ ಅಲ್ಲಿ ವಿಸಿಟರ್ಸ್ ಬೋರ್ಡ್ ಮಾಡಿಲ್ಲ. 500 ಹಾಸಿಗೆಗಳ ಆಸ್ಪತ್ರೆಯ ನ್ನಾಗಿ ಇದನ್ನು ಯಾವಾಗ ಮಾಡುತ್ತೀರಿ?

ಡಾ. ಹೆಚ್. ಸಿ. ಮಹದೇವಪ್ಪ :- ಆಸ್ಪತ್ರೆಯಲ್ಲಿ ಏನು 170 ಹಾಸಿಗೆಗಳಿವೆ ಅದನ್ನು 250 ಕ್ಕೆ ಹೆಚ್ಚಿಸಲು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಸುಮಾರು 790 ಹಾಸಿಗೆಗಳುಳ್ಳ ಆಸ್ಪತ್ರೆ ಈಗ ಹುಬ್ಬಳ್ಳಿಯಲ್ಲಿ ಇದೆ. ಎರಡೂ ಸೇರಿಸಿದರೆ ಎರಡು ನಗರದಿಂದ ಹೆಚ್ಚು ಕಡಿಮೆ ಸುಮಾರು 1000 ಹಾಸಿಗೆಗಳಾಯಿತು. ಅಷ್ಟು ಹಾಸಿಗೆಗಳು ಸಾಕು ಅನಿಸುತ್ತದೆ. ದಯಮಾಡಿ ತಾವು ಸಹಕರಿಸಬೇಕು. ನಾನು ನಿಮಗೆ ಸುಮ್ಮನೆ ಹಾಸಿಗೆಗಳ ಸಂಖ್ಯೆಯನ್ನು ಏರಿಸುತ್ತೇನೆ ಎಂದು ಭರವಸೆ ಕೊಡಿಲಿಕ್ಕೆ ಸಿದ್ಧನಿಲ್ಲ.

ಶ್ರೀ ಚಂದ್ರಕಾಂತ ಬೆಲ್ಲದ್ :- ದಯವಿಟ್ಟು ಜನಸಂಖ್ಯೆಗಾತ್ರದ ಆಧಾರದ ಮೇಲೆ ಅಲ್ಲಿ 500 ಹಾಸಿಗೆಗಳನ್ನು ಮಾಡುವ ಅವಶ್ಯಕತೆ ಇದೆ, ಅದನ್ನು ನೀವು ಮಾಡಿ. ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಮತ್ತೊಮ್ಮೆ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಿಷಯ :- ಮಾಲೂರಿನಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 260 (1925)

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಲೂರು ಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

ಆ) ಈ ಕಾಲೇಜಿನಲ್ಲಿರುವ ಉಪನ್ಯಾಸಕರ ಸಂಖ್ಯೆ ಎಷ್ಟು ;

ಇ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;

ಈ) ಈ ಕಾಲೇಜಿಗೆ ಅಗತ್ಯವಿರುವ ಕಟ್ಟಡವನ್ನು ಕಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) 1989-90 ರಲ್ಲಿ ಪ್ರಾರಂಭವಾಯಿತು. ಸುಮಾರು 700 ವಿದ್ಯಾರ್ಥಿಗಳು.

ಆ) 06 ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಖಾಲಿ ಇದ್ದ ವಾಣಿಜ್ಯ ಶಾಸ್ತ್ರ ಒಂದು ಮತ್ತು ಸಮಾಜಶಾಸ್ತ್ರ ಒಂದು ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಿಂದ ನೇಮಕಾತಿ ಮಾಡಲಾಗಿದೆ. ಮತ್ತೊಂದು ವಾಣಿಜ್ಯ ಶಾಸ್ತ್ರದ ಖಾಲಿ ಹುದ್ದೆಯನ್ನು ಶೀಘ್ರದಲ್ಲಿಯೇ ತುಂಬಲು ಕ್ರಮಕೈಗೊಳ್ಳಲಾಗುತ್ತಿದೆ.

ಈ) ಸರ್ಕಾರಿ ಪದವಿ ಪೂರ್ವ ಕಾಲೇಜಿನ ನಿವೇಶನವನ್ನು ಮಾಲೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ವರ್ಗಾಯಿಸಲಾಗಿದೆ. ಕಟ್ಟಡದ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗುತ್ತಿದೆ ನಂತರ ಅನುದಾನ ಒದಗಿಸುವುದನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಬಿ. ದ್ಯಾವರಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರಗಳನ್ನು ನೋಡಿದ್ದಾಗಿದೆ. ಈ ಕಾಲೇಜು ಪ್ರಾರಂಭವಾಗಿ ಸುಮಾರು 8 ವರ್ಷಗಳಾಯಿತು. ಅಲ್ಲಿ 700 ಜನ ವಿದ್ಯಾರ್ಥಿಗಳಿದ್ದಾರೆ ಅಂತ ಹೇಳುತ್ತಿದ್ದಾರೆ. 6 ಜನ ಉಪಾಧ್ಯಾಯರು ಅಲ್ಲಿದ್ದಾರೆಂದು ಹೇಳುತ್ತಿದ್ದಾರೆ. ಕೇವಲ 6 ಜನ ಉಪಾಧ್ಯಾಯರು ಇದ್ದರೂ-ಈ ವರ್ಷಕ್ಕೆ ಕಾಲೇಜು ಪ್ರಾರಂಭವಾಗಿದೆ. ಇನ್ನೂ 300 ಜನರು ಈ ಸಾಲಿಗೆ ಸೇರುವವರಿದ್ದಾರೆ, ಹಾಗಾದಾಗ ವಿದ್ಯಾರ್ಥಿಗಳ ಸಂಖ್ಯೆ ಒಂದು ಸಾವಿರವನ್ನು ಮೀರಲಿದೆ. ಅಷ್ಟೊಂದು ವಿದ್ಯಾರ್ಥಿಗಳಿಗೆ ಕೇವಲ 6 ಜನ ಉಪಾಧ್ಯಾಯರು ಸಾಕಾಗುವುದಿಲ್ಲ. ಹಿಂದೆ ಆ ಕಾಲೇಜಿನಲ್ಲಿ 10 ಜನ ಅರೆಕಾಲಿಕ ಶಿಕ್ಷಕರಿದ್ದರು. ಈಗ ಅರೆಕಾಲಿಕ ಶಿಕ್ಷಕರನ್ನೆಲ್ಲಾ ತೆಗೆದುಹಾಕಿದ್ದಾರೆ. ಈಗ ಮಾನ್ಯ ಸಚಿವರು ಇಬ್ಬರು ಉಪಾಧ್ಯಾಯರನ್ನು ಅಲ್ಲಿಗೆ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಆ ಎರಡು ಉಪಾಧ್ಯಾಯರುಗಳು ಅಲ್ಲಿಗೆ ಸಾಕಾಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಆ ಕಾಲೇಜಿಗೆ ಸಾಕಷ್ಟು

ಉಪಾಧ್ಯಾಯರನ್ನು ಆದಷ್ಟು ಬೇಗ ನೇಮಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ :- ಮಾನ್ವಿ ಪಟ್ಟಣದ ಪದವಿ ಕಾಲೇಜಿನ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 261 (1714)

ಶ್ರೀ ಗಂಗಾಧರ ನಾಯಕ್ (ಮಾನ್ವಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾನ್ವಿ ಪಟ್ಟಣದಲ್ಲಿರುವ ಡಿಗ್ರಿ ಕಾಲೇಜು ಮಂಜೂರಾಗಿ ಸುಮಾರು 8-9 ವರ್ಷಗಳಾದರೂ ಇನ್ನೂ ಕಾಲೇಜು ಪ್ರಾರಂಭಿಸದಿರಲು ಕಾರಣಗಳೇನು;

ಆ) ಈ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) 1987-88 ನೇ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಗಂಗಾಧರ ನಾಯಕ್ :- ಮಾನ್ಯ ಅಧ್ಯಕ್ಷರೆ, ಮಾನ್ವಿ ಪಟ್ಟಣದಲ್ಲಿರುವ ಡಿಗ್ರಿ ಕಾಲೇಜಿಗೆ ಒಂದು ಹೊಸ ಕಟ್ಟಡ ಮಂಜೂರಾಗಿದ್ದು ಸುಮಾರು 6-7 ವರ್ಷಗಳಿಂದ ಅದರ ಕೆಲಸ ಸ್ಥಗಿತಗೊಂಡಿದೆ. ಇಲ್ಲಿರತಕ್ಕ ಕಾಲೇಜಿನಲ್ಲಿ ಜೂನಿಯರ್ ಕಾಲೇಜು ಮತ್ತು ಡಿಗ್ರಿ ಕಾಲೇಜು ಒಟ್ಟೊಟ್ಟಿಗೇ ಸೇರುವುದರಿಂದ, ಹುಡುಗರ ಸಂಖ್ಯೆ ತುಂಬಾ ಜಾಸ್ತಿಯಾಗಿದೆ. ಆ ಕಾಲೇಜಿಗೆ ಕಟ್ಟಡವು ಸಪರೇಟಾಗಿ ಮಂಜೂರಾಗಿ 7-8 ವರ್ಷಗಳಾಯಿತು. ಆದರೆ ಆ ಕಟ್ಟಡ ಇನ್ನೂ ಅರ್ಧದಲ್ಲೇ ಉಳಿದಿದೆ ಅದನ್ನು ಪೂರ್ಣಗೊಳಿಸಿ, ಅಲ್ಲಿ ಯಾವಾಗ ತರಗತಿಗಳನ್ನು ಪ್ರಾರಂಭಿಸುತ್ತೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ಅನೇಕ ಸಂದರ್ಭಗಳಲ್ಲಿ ಉತ್ತರವನ್ನು ಹೇಳಿದ್ದೇನೆ. ಈ ಕಟ್ಟಡದ ನಿರ್ಮಾಣಕ್ಕೋಸ್ಕರ ನಮ್ಮ ಈ ವರ್ಷದ ಆಯವ್ಯಯದಲ್ಲಿ ಕೇವಲ 3 ಕೋಟಿ ರೂಪಾಯಿಗಳನ್ನು ಮಾತ್ರ ಇಡಲಾಗಿದೆ. ಒಂದು ವರ್ಷದಲ್ಲಿ ಆನ್ ಗೋಯಿಂಗ್ ಸ್ಕೀಮ್‌ಗಳಿಗಾಗಿ ಸುಮಾರು 9 ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಅಲ್ಲದೇ ಹೊಸ ಕಾಲೇಜುಗಳನ್ನೂ ಕೂಡ ಪ್ರಾರಂಭ ಮಾಡಿದ್ದೇವೆ. ಅವುಗಳಿಗೆ ಕಟ್ಟಡ ಒದಗಿಸಲು ಸುಮಾರು 10 ಕೋಟಿ